**ಸಿ.ಸಿ.ನಂ. 650/2015**
**ಪಿ.ಡಬ್ಲ್ಯೂ:01**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ದಿನಾಂಕಃ 04.11.2025</u>**
**<u>ಮುಖ್ಯವಿಚಾರಣೆ ಹೇಳಿಕೆ ದೂರುದಾರರ ಪರ ಶ್ರೀ. ಎಮ್ ಎಚ್ ಕೆ</u>**

**<u>ವಕೀಲರಿಂದ</u>**

1. ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಾಗಿದ್ದು ನನ್ನ ಸ್ವಯಂ ಪ್ರಮಾಣಿತ ಹೇಳಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕೆಂದು ಕೋರುತ್ತೇನೆ.

2. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿ ನೀಡಿದ ಚೆಕ್ಕನ್ನು ಹಾಜರುಪಡಿಸಿದ್ದು, ಚೆಕ್ಕನ್ನು ನಿಪಿ-1 ಎಂದು, ಅದರಲ್ಲಿ ಆರೋಪಿಯ ಸಹಿ ಇರುತ್ತದೆ. ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಬ್ಯಾಂಕಿನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು, ದಿನಾಂಕ:23.03.2015 ರಂದು ನಮ್ಮ ವಕೀಲರ ಮುಖಾಂತರ ಆರೋಪಿತರಿಗೆ ನೀಡಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ-3 ಎಂದು, ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, ಜಾರಿ ಆಗದೆ ಬಂದ ಅಂಚೆ ಲಕೋಟೆಯನ್ನು ಈಗ ತೆರೆದ ನ್ಯಾಯಾಲಯದಲ್ಲಿ ತರೆದು ನೋಡಲಾಗಿ ಸದರಿ ಅಂಚೆ ಅಲಕೋಟೆಯನ್ನು ನಿಪಿ-5 ಎಂದು, ಅದರೊಳಗೆ ಇದ್ದ ನೋಟಿಸನ್ನು ನಿಪಿ-5ಎ ಎಂದು, ಒಂದು ಕೈಗಡ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

3. ಆರೋಪಿ ವಿರುದ್ದ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಪ್ರಾರ್ಥಿಸಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ, ಹೇ, ಕೇ, ಸರಿ ಇದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**